ಟೈಟಾನಿಕ್

ಕಳೆದು ಹೋಯಿತು...ಮತ್ತೇ ಸಿಕ್ಕಿತು.

ಜೂಡಿ ಡೊನ್ನೆಲ್ಲಿ

ಚಿತ್ರಗಳುಃಕೀಥ್ ಕೋಹ್ಲೆರ್

ಟೈಟಾನಿಕ್

ಕಳೆದು ಹೋಯಿತು...ಮತ್ತೇ ಸಿಕ್ಕಿತು.



ಜೂಡಿ ಡೊನ್ನಲ್ಲಿ

ಚಿತ್ರಗಳು:ಕೀಥ್ ಕೋಹ್ಲೆರ್

ಕನ್ನಡಕ್ಕೆ ಪ್ರಭಾಕರ ನಾನಾವಟಿ



1

ಅಚ್ಚರಿಗೊಳಿಸಿದ ಹಡಗು!

ಇಡೀ ಜಗತ್ತೇ ಈ ಅಚ್ಚರಿಗೊಳಿಸುವ ಹಡಗಿನ ಬಗ್ಗೆ ಮಾತನ್ನಾಡುತ್ತಲಿದೆ.ಇದರ ಹೆಸರು ಟೈಟಾನಿಕ್ ಎಂದು. ಮಹಾಸಾಗರವನ್ನು ದಾಟುವ ತನ್ನ ಮೊದಲನೆಯ ಪ್ರವಾಸಕ್ಕೆ ಹಡಗು ಅಣಿಯಾಗಿದೆ. ಇಂಗ್ಲಂಡದಿಂದ ಅಮೇರಿಕೆಗೆ ಹೋಗಲು ಸಜ್ಜಾಗಿದೆ.

ಎಲ್ಲ ವೃತ್ತಪತ್ರಗಳು “ಅಚ್ಚರಿಗೊಳಿಸುವ ಹಡಗು.” ಎಂದು ಬಣ್ಣಿಸುತ್ತಿದ್ದಾರೆ. ಇದು ಒಂದು ಸಮುದ್ರದ ಮೇಲೆ ತೇಲುತ್ತಿರುವ ಬೃಹತ್ತಾಕಾರದ ಅರಮನೆ. ಇದರಲ್ಲಿ ಹೋಟಲ್ಲುಗಳಿವೆ, ಅಂಚೆ ಮನೆ ಇದೆ, ಅಷ್ಟೇ ಏಕೆ, ವ್ಯಾಯಾಮ ಶಾಲೆ ಕೂಡ ಇದೆ. ಆಟವಾಡಲು ಆಟಿಗೆಯ ಒಂಟೆ ಕೂಡ ಇದರಲ್ಲಿದೆ.

ಹಡಗಿನ ಈ ಅರ್ಧಭಾಗದ ಚಿತ್ರವು ಹಡಗಿನ ಒಳನೋಟವನ್ನು ತೋರಿಸುತ್ತದೆ. ಚೆನ್ನಾಗಿ ಸಿಂಗರಿಸಿದ ಕೋಣೆಗಳು ಮೇಲಿನ ಡೆಕ್ ದಲ್ಲಿವೆ. ಕೆಳಗಿನ ಡೆಕ್ ದ ಮೇಲಿನ ಟೆನಿಸ್ ಕೋರ್ಟ ಮತ್ತು ಸ್ವಿಮಿಂಗ ಪೂಲ ನೀವು ನೋಡಬಹುದು.



ಈವರೆಗಿನ ರಚನೆ ಮಾಡಿದ ಎಲ್ಲ ಪ್ರವಾಸಿ ಹಡಗುಗಳಲ್ಲಿಯ ಅತೀ ದೊಡ್ಡ ಹಡಗು 'ಟೈಟಾನಿಕ್' ಎಂದೆನ್ನಬಹುದು. ಈ ಹಡಗಿನ ಕ್ಷೇತ್ರವು ಮಹಾನಗರದ ನಾಲ್ಕು ಉಪನಗರಗಳಷ್ಟು ಮತ್ತು ಎತ್ತರವು ಹನ್ನೊಂದು ಮಹಡಿಯಷ್ಟಿತ್ತು.
ತಜ್ಞರ ಹೇಳಿಕೆಯಂತೆ ಈ ಹಡಗು ಬಹಳ ಸುರಕ್ಷಿತವಾದದ್ದು. ಇದೂ ಎಂದಿಗೂ ಮುಳುಗಲಾರದು ಎಂದು ತಜ್ಞರು ಎದೆ ತಟ್ಟಿ ಹೇಳಿದರು. ಏಕೆ ಗೊತ್ತೇ? ಇದಕ್ಕೆ ಒಂದೇ ತಳವಿಲ್ಲ. ಎರಡು ತಳಗಳು. ಒಂದರ ಒಳಗೆ ಮತ್ತೊಂದು.

ಟೈಟಾನಿಕ್ ದ ಕೆಳಗಿನ ಭಾಗವನ್ನು 16 ಜಲನಿರೋಧಕ ವಿಭಾಗಗಳಿಂದ ಕಟ್ಟಲಾಗಿತ್ತು. ಒಂದು ವಿಭಾಗದಲ್ಲಿ ನೀರು ಸೇರುತ್ತಿದ್ದರೆ ಹಡಗಿನ ಕಪ್ತಾನನು ಒಂದು ಸ್ವಿಚ್ ಒತ್ತಿ ಉಕ್ಕಿನ ಬಾಗಿಲಿನಿಂದ ಅದನ್ನು ಗಟ್ಟಿಯಾಗಿ ಮುಚ್ಚಿ ನೀರನ್ನು ತಡೆಹಿಡಿಬಹುದು. ಹಡಗಿನ ಉಳಿದ ವಿಭಾಗಗಳಲ್ಲಿ ನೀರು ಸೇರದಂತೆ ಉಪಾಯ ಮಾಡಬಹುದು. ಎರಡು-ಮೂರು ವಿಭಾಗಗಳಲ್ಲಿ ನೀರು ಹರಿದರೂ ಹಡಗಿಗೆ ಅಪಾಯ ಉಂಟಾಗಲಿಕ್ಕಿಲ್ಲ. ಹಡಗು ಸಲೀಸಾಗಿ ಪ್ರಯಾಣ ಮಾಡಬಹುದು.

ಟೈಟಾನಿಕ್ ಕ್ಕೆ ಇನ್ನೊಂದು ಹೆಸರೆಂದರೆ “ಶ್ರೀಮಂತ ವ್ಯಕ್ತಿಗಳ ವಿಶೇಷ." ಆ ಕಾಲದ ಜಗತ್ತಿನಲ್ಲಿಯ ಸಿರಿವಂತರೆಲ್ಲ ಟೈಟಾನಿಕ್ ದಿಂದ ಪ್ರವಾಸ ಮಾಡಬಯಸಿದರು. ಅವರ ಪ್ರವಾಸದ ಒಂದು ಟಿಕೆಟ್ಟಿನ ಬೆಲೆ ಒಬ್ಬ ನಾವಿಕನ ಇಡೀ ಆಯುಷ್ಯದಲ್ಲಿ ಗಳಿಸಿದ ಸಂಬಳದಷ್ಟಿತ್ತು.

ಆದರೆ ಎಲ್ಲ ಪ್ರವಾಸಿಗಳು ಸಿರಿವಂತರಿರಲಿಲ್ಲ. ಎಲ್ಲರೂ ಮಜಾ ಮಾಡಲೆಂದು ಪ್ರವಾಸಕ್ಕೆ ಹೋಗುತ್ತಿರಲಿಲ್ಲ. ಅವರಲ್ಲಿಯ ಕೆಲವರು ಅಮೇರಿಕೆಗೆ ಕೆಲಸ ಶೋಧಿಸಲು ಹೊರಟಿದ್ದರು.

ಕೊನೆಗೆ ಆ ಮಹತ್ವದ ಪ್ರಯಾಣದ ಕ್ಷಣ ಬಂದೇ ಬಿಟ್ಟಿತು. ಟೈಟಾನಿಕ್ ಪ್ರಯಾಣಕ್ಕೆ ಸಿದ್ಧವಾಯಿತು! ಬಂದರದ ದಂಡೆಯಲ್ಲಿ ಜನಸಮೂಹ ಸಾಲಾಗಿ ನಿಂತಿತು. ಅವರ ಕೈಯಲ್ಲಿಯ ಧ್ವಜಗಳು ಹಾರಾಡುತ್ತಿದ್ದವು. ಬ್ಯಾಂಡುಗಳ ಧ್ವನಿ ಕೇಳಿಸುತ್ತಿತ್ತು. ಪ್ರಯಾಣಿಕರು ಹಡಗಿನ ಡೆಕ್ ಮೇಲೆ ಹೋಗತೊಡಗಿದರು. ತಮ್ಮ ತಮ್ಮ ಸ್ನೇಹಿತರಿಗೆ ವಿದಾಯ ಹೇಳಿ ಹತ್ತತೊಡಗಿದರು. ಹಡಗಿನ ಎಂಜಿನ್ ಗಳು ಗರ್ಜಿಸತೊಡಗಿದವು. ಹಡಗು ನಿದಾನವಾಗಿ ಬಂದರದ ನೀರಿನಿಂದ ಹೊರಬೀಳತೊಗಿತು. ಟೈಟಾನಿಕ ತನ್ನ ಮೊದಲನೆಯ ಪ್ರಯಾಣವನ್ನು ಆರಂಭಿಸಿತು. ಆದರೆ ಈ ಪ್ರಯಾಣದ ಕೊನೆ ಹೇಗಾಗಬಹುದು ಎಂಬುದನ್ನು ಯಾರೂ ಊಹಿಸಲಿಲ್ಲ.



2

ಮಂಜುಗಡ್ಡೆ

14 ಎಪ್ರಿಲ್, 1912. ಟೈಟಾನಿಕ್ ಕ್ಯಾನಡಾದ ಸಮುದ್ರ ದಂಡೆಯ ಹಿಮಗಟ್ಟಿದ ನೀರಿನಲ್ಲಿ ಬಂದಿತ್ತು. ರಾತ್ರಿಯ ಸಮಯ. ಎಲ್ಲ ಕಡೆಗೂ ಶಾಂತತೆ. ಸಮುದ್ರವು ಗಾಜಿನಂತೆ ನಿರರ್ಗಳವಾಗಿ ಕಾಣುತ್ತಿತ್ತು. ಹವೆಯಲ್ಲಿಯ ಶೀತವು ಮೈಯನ್ನು ನಡುಗಿಸುತ್ತಿತ್ತು.

ಪ್ರಯಾಣಿಕರೆಲ್ಲರು ಸಂಜೆ ಊಟ ಮುಗಿಸಿದ್ದರು. ಕೆಲವರು ಕೋಣೆಯಲ್ಲಿ ಇಸ್ಪೀಟ ಆಟವಾಡುತ್ತ ವೇಳೆ ಕಳೆಯತ್ತಿದ್ದರು. ಉಳಿದವರು ತಮ್ಮ ಕೋಣೆಗೆ ಮಲಗಲು ಹೋದರು.

ರಾತ್ರಿಯ ಸಮಯದಲ್ಲಿ ಒಳಗೆ ಇರುವದೇ ಒಳ್ಳೆಯದು. ಆದರೆ ಏನಾದರೂ ಅಪಾಯ ಗಳಿದ್ದರೆ ಜಾಗ್ರತೆಯಿಂದ ಇರಬೇಕು. ರಕ್ಷಣಾಧಿಕಾರಿ ಹಡಗಿನ ತುಟ್ಟತುದಿಯ ಮೇಲಿಂದ ಸುತ್ತಲು ಕಣ್ಣು ಹರಿಸುತ್ತಿದ್ದನು. ಆದರೆ ಕತ್ತಲೆಯಲ್ಲಿ ಏನೂ ಕಾಣುತ್ತಿರಲಿಲ್ಲ.

ಒಮ್ಮೆಲೆ ಆತನಿಗೆ ಕತ್ತಲೆಯಲ್ಲಿ ಒಂದು ಕಪ್ಪು ಆಕೃತಿ ಕಂಡಿತು. ಅದು ಒಂದು ಹಿಮದ ಗುಡ್ಡದಂತಹ ಒಂದು ದೊಡ್ಡ ಮಂಜುಗಡ್ಡೆ! ಟೈಟಾನಿಕ್ ಆ ದಿಕ್ಕಿಗೆ ಹೋಗುತ್ತಿತ್ತು. “ಮಂಜುಗಡ್ಡೆ ಮುಂದೆ ಇದೆ!” ಅವನು ಒದರಿ ಹೇಳಿದನು.

ಕೆಳಗಿದ್ದ ನಾವಿಕರು ಹಡಗನ್ನು ತಿರುಗಿಸಿ ಮಂಜುಗಡ್ಡೆಯಿಂದ ದೂರ ಒಯ್ಯಲು ಪ್ರಯತ್ನಿಸುತ್ತಿದ್ದರು. ಆದರೆ ಈಗಾಗಲೇ ತಡವಾಗಿತ್ತು.
ಹಡಗಿನ ಒಂದು ಅಂಚು ಮಂಜುಗಡ್ಡೆಯನ್ನು ಕೊಯ್ದು ಮುನ್ನುಗ್ಗಲು ಪ್ರಯತ್ನಿಸುತ್ತಿತ್ತು. ಘರ್ಷಣೆಯಾಗುವ ಸಪ್ಪಳ.ಆದರೆ ಅದು ಅಷ್ಟು ವಿಶೇಷವಿದೆ ಎಂದು ಅನ್ನಿಸಲಿಲ್ಲ. ಕೆಲವರಂತೂ ಅದನ್ನು ಪೂರ್ಣ ದುರ್ಲಕ್ಷಿಸಿದರು.

ಆದರೆ ಕಪ್ತಾನನು ತನ್ನ ಕೋಣೆಯಿಂದ ಅವಸರದಿಂದ ಹೊರಬಿದ್ದನು. ಅವನು ಕೆಳಗೆ ಹೋದನು. ಹಡಗಿಗೆ ಏನಾದರೂ ಧಕ್ಕೆ ತಗಲಿದೆಯೇ ಎಂಬುದನ್ನು ನೋಡಲು ಕೆಳಗಿಳಿದನು. ಆಗ ಅವನಿಗೆ ನಿಜವಾದ ಸಂಗತಿ ತಿಳಿಯಿತು.
ಮಂಜುಗಡ್ಡೆಯು ಹಡಗಿಗೆ ಸಾಕಷ್ಟು ಅಪಾಯವನ್ನು ಮಾಡಿತ್ತು. ನೀರು ಒಳಸೇರುತ್ತಲಿತ್ತು.
ಜಲನಿರೋಧಕ ಐದು ವಿಭಾಗಗಳು ನೀರಿನಿಂದ ತುಂಬಿದ್ದವು. ಈಗ ಏನೇನೂ ಮಾಡಲು ಸಾಧ್ಯವಿರಲಿಲ್ಲ.
ಇದೆಲ್ಲ ಅಶಕ್ಯವೆನ್ನಿಸಿತು. “ಹಡಗು ಮುಳುಗಬಹುದು!” ಎಂದು ಯಾರೂ ನಂಬಿರಲಿಲ್ಲ.



ಕಪ್ತಾನನು ಆಜ್ಞೆ ಕೊಡತೊಡಗಿದನು.
“ಪ್ರಯಾಣಿಕರನ್ನು ಎಚ್ಚರಿಸಿ! ಸಹಾಯಕ್ಕಾಗಿ ರೇಡಿಯೋದಿಂದ ಸಂಪರ್ಕಿಸಿ! ಜೀವ ಉಳಿಸುವ ಲೈಫ್ ಬೋಟ್ ಗಳನ್ನು ಸಿದ್ಧಗೊಳಿಸಿ!”
ಕಪ್ತಾನನು ಎದೆಗುಂದಿದನು. 2227 ಪ್ರಯಾಣಿಕರು ಹಡಗಿನಲ್ಲಿದ್ದರು. ಆದರೆ ಹಡಗಿನಲ್ಲಿ ಕೇವಲ 1100 ಜನರಿಗೆ ಸಾಕಾಗುವಷ್ಟೇ ಲೈಫ್ ಬೋಟ್ ಗಳಿದ್ದವು.

ಪ್ರಯಾಣಿಕರಿಗೆ ಇದು ಯಾವದೂ ಗೊತ್ತಿರಲಿಲ್ಲ. ಜನ ಡೆಕ್ ದ ಮೇಲೆ ನಗುತ್ತ, ಚೇಷ್ಟೆ ಮಾಡುತ್ತ ಬರತೊಡಗಿತು. ಎಷ್ಟೋ ಜನರು ರಾತ್ರಿಯ ಉಡುಗೆಯಲ್ಲಿದ್ದರು. ಆದರೆ ಅವರ ಮುಖದ ಮೇಲೆ ಯಾವದೇ ಚಿಂತೆಯ ಅಂಶವಿರಲಿಲ್ಲ. ಈ ಹಡಗು ಮುಳುಗಲು ಅಶಕ್ಯವೆಂದೇ ಎಲ್ಲರು ತಿಳಿದಿದ್ದರು.

“ಲೈಫ್ ಬೋಟ್ ಗಳಲ್ಲಿ ಕುಳಿತು ಹೋಗಿ.” ಎಂದು ನಾವಿಕರು ವಿನಂತಿಸುತ್ತಿದ್ದರು. “ಮೊದಲು ಮಕ್ಕಳು, ಆಮೇಲೆ ಮಹಿಳೆಯರು.” ಎಂದು ಬಿನ್ನವಿಸುತ್ತಿದ್ದರು. “ಆ ಮೇಲೆ ಸ್ಥಳವಿದ್ದರೆ ಗಂಡಸರು.” ಎಂದು ಹೇಳುತ್ತಿದ್ದರು. ಆದರೆ ಯಾರಿಗೂ ಲೈಫ್ ಬೋಟ್ ದಲ್ಲಿ ಕೂಡಲು ಮನಸ್ಸಿರಲಿಲ್ಲ. ದೊಡ್ಡ ಹಡಗೇ ಸುರಕ್ಷಿತ, ಲೈಫ್ ಬೋಟ್ ಗಳು ಕೆಲಸಕ್ಕೆ ಬಾರದವು ಎಂದು ಅವರು ಯೋಚಿಸುತ್ತಿದ್ದರು.

ನಾವಿಕರೆಲ್ಲ ಅವಸರ ಮಾಡುತ್ತಿದ್ದರು. ಪರಿಸ್ಥಿತಿಯ ಗಾಂಭೀರ್ಯ ಅವರಿಗಿತ್ತು. ಅವರು ಪ್ರಯಾಣಿಕರನ್ನು ಒತ್ತಾಯ ಮಾಡಿ ಲೈಫ್ ಬೋಟ್ ದಲ್ಲಿ ಕೂಡಿಸತೊಡಗಿದರು. ಕೆಲವು ತುಂಬಿದವು. ಕೆಲವು ತುಂಬಲಿಲ್ಲ. ಆದರೂ ಲೈಫ್ ಬೋಟ್ ಗಳನ್ನು ಸಮುದ್ರದಲ್ಲಿ ಬಿಡಲಾಯಿತು.

ಎಷ್ಟೋ ಪ್ರಯಾಣಿಕರು ಲೈಫ್ ಬೋಟ್ ದಿಂದ ದೂರವಿದ್ದರು. ಅವರೆಲ್ಲ ಬಡ ಜನರು. ಕೆಳಗಿರುವ ಕೋಣೆಗಳಲ್ಲಿದ್ದ ಜನರು. ಅವರಿಗೆ ತಮ್ಮ ಮೇಲಿನ ಆಪತ್ತಿಯ ಬಗ್ಗೆ ಪೂರ್ಣ ಕಲ್ಪನೆ ಇತ್ತು. ಆದರೆ ಅವರಿಗೆ ಅಲ್ಲಿಂದ ಪಾರಾಗಲು ಹೇಗೆ ಹೋಗಬೇಕು ಎಂಬುದು ತಿಳಿಯಲಿಲ್ಲ. ಕೆಲವರು ಪ್ರಯತ್ನ ಮಾಡಿ ಮೇಲಿನ ಡೆಕ್ ಮುಟ್ಟಿದರು. ಕೆಲವರು ನಾವಿಕರಿಗೆ ಸಹಾಯ ಮಾಡತೊದಗಿದರು. ಆದರೂ ಬಹಳಷ್ಟು ಜನರು ಕೆಳಗೆ ಸಿಕ್ಕಿಬಿದ್ದರು.

ರೇಡಿಯೋ ರೂಮಿನಲ್ಲಿಯ ಚಾಲಕರು ಸಹಾಯ ಪಡೆಯಲು ಒಂದೇ ಸವನೆ ಸಮೀಪದಲ್ಲಿರುವ ಹಡಗುಗಳ ಸಂಪರ್ಕದಲ್ಲಿದ್ದರು. ಅವರಿಗೆ ವಿನಂತಿ ಕೇಳಿಸಿದರೂ ಬಹಳ ದೂರವಿದ್ದದ್ದರಿಂದ ಸಹಾಯ ಮಾಡಲು ಶಕ್ಯ ವಾಗಲಿಲ್ಲ.
ಒಂದು ಹಡಗು ಅಷ್ಟೊಂದು ದೂರವಿರಲಿಲ್ಲ. ಅದರ ಹೆಸರು ಕ್ಯಾಲಿಫೋರ್ನಿಯನ್. ಟೈಟಾನಿಕ್ ದಿಂದ 10 ಮೈಲು ದೂರದಲ್ಲಿತ್ತು. ಕೆಲವೇ ನಿಮಿಷಗಳಲ್ಲಿ ಅದು ಬಂದು ಕೆಲವರ ಜೀವವನ್ನು ಉಳಿಸಬಹುದಿತ್ತು.

ಟೈಟಾನಿಕ್ ದ ಚಾಲಕರು ಕ್ಯಾಲಿಫೋರ್ನಿಯನ್ ಹಡಗನ್ನು ಸಂಪರ್ಕಿಸಲು ಪ್ರಯತ್ನ ಮಾಡುತ್ತಿದ್ದರು. ಆದರೆ ಕ್ಯಾಲಿಫೋರ್ನಿಯನ್ ದಿಂದ ಉತ್ತರ ಬರುತ್ತಿದ್ದಿಲ್ಲ. ನಡುರಾತ್ರಿಯಾದ್ದರಿಂದ ಹಡಗಿನ ರೇಡಿಯೋವನ್ನು ಸ್ವಿಚ್ ಆಫ್ ಮಾಡಿ ಮಲಗಿರಬಹುದು. ಇವರ ಸಹಾಯದ ಕರೆ ಅಲ್ಲಿಯ ಯಾರಿಗೂ ಕೇಳಿಸಲಿಲ್ಲ.
ಹೇಗಾದರೂ ಮಾಡಿ ಕ್ಯಾಲಿಫೋರ್ನಿಯನ್ ಜೊತೆ ಸಂಪರ್ಕಿಸಲು ಅವರು ಬಣ್ಣ-ಬಣ್ಣದ ರಾಕೆಟ್ಟುಗಳನ್ನು ಆಕಾಶದಲ್ಲಿ ಹಾರಿಸಿದರು. ಕ್ಯಾಲಿಫೋರ್ನಿಯನ್ ನಾವಿಕರು ರಾಕೆಟ್ಟುಗಳನ್ನು ನೋಡಿದರು. ಆದರೆ ಟೈಟಾನಿಕ್ ತೊಂದರೆಯಲ್ಲಿದೆ ಎಂಬುದು ಅವರಿಗೆ ಹೊಳೆಯಲಿಲ್ಲ. ಹೀಗಾಗಿ ಅವರು ಸಹಾಯಕ್ಕೆ ಬರಲೇ ಇಲ್ಲ.



ಟೈಟಾನಿಕ ಮೇಲಿನ ಸಂಗೀತ ನಿಲ್ಲಲಿಲ್ಲ. ಉಲ್ಲಾಸ ಕೊಡುವ ಸಂಗೀತ. ಆದರೆ ಜನರೆಲ್ಲ ಅಂಜಿದ್ದರು. ಅವರ ಕಾಲ್ಕೆಳಗಿನ ಡೆಕ್ ಡೊಂಕಾಗತೊಡಗಿತ್ತು. ಹಡಗು ಇನ್ನಷ್ಟು ಡೊಂಕಾಗತೊಡಗಿತು. ಕೆಳಗಿನ ಡೆಕ್ ನೀರಲ್ಲಿ ಮುಳುಗತೊಡಗಿತು.

ಒಂದೆರಡು ಲೈಫ್ ಬೋಟ್ ಗಳು ಉಳಿದಿದ್ದವು. ನಾವಿಕರಿಗೆ ಅವುಗಳನ್ನು ಕೆಳಗಿಳಿಸಲು ಶಕ್ಯವಾಗಲಿಲ್ಲ. ಇನ್ನೂ ನೂರಾರು ಪ್ರಯಾಣಿಕರು ಹಡಗಿನಲ್ಲಿದ್ದರು. ಎಲ್ಲರಿಗೂ ತಮ್ಮ ಅಂತ್ಯಕಾಲ ಬಂದಿದ್ದರ ಅರಿವು ಉಂಟಾಯಿತು. ವೃದ್ಧ ದಂಪತಿಗಳು ಕೈಹಿಡಿದುಕೊಳ್ಳತೊಡಗಿದರು. ಹೆಂಡಂದಿರು ತಮ್ಮ ಗಂಡಂದಿರನ್ನು ಬಿಟ್ಟು ದೂರಹೋಗಲಾರರು. ಅವರಲ್ಲಿಯ ಒಬ್ಬನು ಒಳ್ಳೆಯ ಬಟ್ಟೆಗಳನ್ನು ಧರಿಸಿದನು. “ನಾನು ಸಭ್ಯ ವ್ಯಕ್ತಿಯಂತೆ ಸಾಯುವೆ,” ಎಂದು ಹೇಳಿದನು.

ಕೆಲವರು ಹಿಮಗಟ್ಟಿದ ನೀರಿನಲ್ಲಿ ಜಿಗಿದರು. ಅವರಲ್ಲಿಯ ಕೆಲವರ ದೈವ ಬಲವತ್ತರವಾಗಿತ್ತು. ಅವರಿಗೆ ಲೈಫ್ ಬೋಟ್ ದೊರೆಯಿತು.





ಲೈಫ್ ಬೋಟ್ ದಲ್ಲಿದ್ದವರು ಟೈಟಾನಿಕ್ ದಿಂದ ದೂರ ಹೋಗುತ್ತಿದ್ದರು. ಎಲ್ಲರೂ ಆ ಸುಂದರವಾದ ಹಡಗನ್ನೇ ನೋಡುತ್ತಿದ್ದರು. ಅದರ ಮೇಲಿನ ವಿದ್ಯುತ್ ದೀಪಗಳು ಹೊಳೆಯುತ್ತಿದ್ದವು. ಸಂಗೀತವು ನೀರಿನ ಮೇಲೆ ತೇಲುತ್ತ ಮುಂದೆ ಸರಿಯುತ್ತಿತ್ತು.

ಒಮ್ಮೆಲೆ ಸಂಗೀತ ನಿಂತುಬಿಟ್ಟತು.
ಕಿವಿಗಡಚಿಕ್ಕುವ ದೊಡ್ಡ ಸಪ್ಪಳ ಕೇಳಿಸಿತು.
ಈ ದೊಡ್ಡ ಹಡಗು ಮೆಲ್ಲ ಮೆಲ್ಲನೆ
ಮಹಾಸಾಗರದಲ್ಲಿ ಮುಳುಗತೊಡಗಿತು.
ಹಡಗು ಡೊಂಕಾಗುತ್ತ ಜೋಕಾಲಿಯ ಹಾಗೆ
ಅದರ ಒಂದು ಬದಿ ಮೇಲೆದ್ದಿತು.
ಒಂದು ಕ್ಷಣ ಟೈಟಾನಿಕ್ ಮುಗಿಲನ್ನು
ನೋಡುತ್ತಿರುವಂತೆ ಕಂಡಿತು. ಆದರೆ
ಮರುಕ್ಷಣ ಅದು ಸಮುದ್ರದ ಕಪ್ಪು ನೀರಿನಲ್ಲಿ
ಮಾಯವಾಯಿತು.



3

ಮತ್ತೆಂದಿಗೂ ಇಲ್ಲ.

ಎಪ್ರಿಲ್ 15 ರ ಮಧ್ಯರಾತ್ರಿಯ 2.20 ಗಂಟೆ.
ಟೈಟಾನಿಕ್ ಅದೃಶ್ಯವಾಯಿತು.
ಲೈಫ್ ಬೋಟ್ ದಲ್ಲಿಯ ಪ್ರಯಾಣಿಕರು ಆಕಾಶದ ಕಡೆ ನೋಡುತ್ತಿದ್ದರು. ಆಕಾಶದ ತುಂಬೆಲ್ಲ ಮಿನುಗುವ ಚುಕ್ಕೆಗಳು. ಆದರೂ ಕತ್ತಲೆ ಕವಿದಿದೆ. ಸುತ್ತಮುತ್ತಲು ಚಳಿಗಾಳಿ.
ಲೈಫ್ ಬೋಟ್ ಗಳು ಮುನ್ನಡೆಯುತ್ತವೆ. ಅಗಲುತ್ತವೆ. ಜನರೆಲ್ಲ ದಾರಿ ನೋಡುತ್ತಲಿದ್ದಾರೆ. ಚಳಿಯಿಂದ ಪಾರಾಗಲು ಪ್ರಯತ್ನಿಸುತ್ತಿದ್ದಾರೆ. ಕೆಲವರು ಫರ್ ದಿಂದ ಮಾಡಿದ ಉಡುಪುಗಳನ್ನು ಧರಿಸಿದ್ದಾರೆ. ಕೆಲವರು ಮಲಗುವಾಗಿನ ಉಡುಪಿನಲ್ಲಿದ್ದಾರೆ. ಒಬ್ಬನಂತೂ ಅರ್ಧನಗ್ನಾವಸ್ಥೆಯಲ್ಲಿದ್ದಾನೆ. ನೀರಲ್ಲಿ ಜಿಗಿದು ಈಜಾಡಿ ಬಂದವರ ಬವಣೆ ಹೇಳತೀರದಷ್ಟು. ಮೈಎಲ್ಲ ಒದ್ದೆಯಾಗಿದೆ. ಅರಿವೆ, ತಲೆಗಳ ಮೇಲೆ ಹೆಪ್ಪುಗಟ್ಟಿದ ಹಿಮದ ತುಂಡುಗಳು.

ಒಂದು ಲೈಫ್ ಬೋಟ್ ತಿರುವು
ಮುರುವಾಯಿತು. ಅದರಲ್ಲಿ ಮೂವತ್ತು
ಜನರಿದ್ದರು. ಲೈಫ್ ಬೋಟ್
ಮುಳುಗಬಾರದೆಂದು ಮತ್ತೊಂದು
ಮಗ್ಗಲಿಗೆ ಬಗ್ಗುತ್ತಿದ್ದರು. ಹಿಮದ ಗಾಳಿ
ಅವರ ಕಾಲುಗಳನ್ನು ಕೊರೆಯುತ್ತಿತ್ತು.



ಮತ್ತೊಂದು ಲೈಫ್ ಬೋಟ್ ಜನರನ್ನುಳಿಸಲು
ತಿರುಗಿ ಹೋಗುತ್ತಿತ್ತು. ಅದು ಒಬ್ಬನ ಜೀವ
ಉಳಿಸಿತು. ಆತನು ಒಂದು ಕಟ್ಟಿಗೆಯ ಮುರಿದ
ಬಾಗಿಲಿನ ಮೇಲಿದ್ದನು. ಉಳಿದವರು ಯಾರೂ
ಅಲ್ಲಿ ಕಾಣಲಿಲ್ಲ. ಇಂತಹ ಹೆಪ್ಪುಗಟ್ಟಿದ ನೀರಿನಲ್ಲಿ
ಬದುಕಿ ಉಳಿಯುವದು ಶಕ್ಯವಿಲ್ಲ.

ಗಂಟೆಗಳು ಕಳೆಯುತ್ತಿದ್ದವು. ಆಕಾಶದಲ್ಲಿ ಬೆಳಕು ಮೂಡತೊಡಗಿತು. ಸಹಾಯಕ್ಕಾಗಿ ಯಾರೂ ಬರಲಾರರು, ಎಂದೆನ್ನಿಸಿತು. ಅಷ್ಟರಲ್ಲಿ ಒಂದು ವಿದ್ಯುದ್ದೀಪದ ಬೆಳಕಿನ ಫ್ಲಾಶ್ ಕಾಣಿಸಿತು. ಮತ್ತೆರಡು ಸಲ ಅದೇ ಫ್ಲಾಶ್. ಅದು ಮತ್ತೊಂದು ಹಡಗಿನಿಂದ ಬರುತ್ತಿತ್ತು. ಅದರ ಹೆಸರು ಕಾರ್ಪಾಥಿಯಾ. ಅದು 50 ಮೈಲು ದೂರವಿರಬಹುದು.
ಎಲ್ಲರಲ್ಲಿ ಉತ್ಸಾಹ ಸಂಚರಿಸಿತು. ಅವರು ಕೈ ಬೀಸತೊಡಗಿದರು. ಟಾರ್ಚಗಳನ್ನು ಬೆಳಗಿಸತೊಡಗಿದರು. ಕಾಗದದ ಸುರುಳಿಗೆ, ಕರವಸ್ತ್ರಗಳಿಗೆ ಬೆಂಕಿ ಹಚ್ಚಿ ಬೀಸತೊಡಗಿದರು. ಹಡಗು ತಮ್ಮನ್ನು ಕಾಣುವಂತೆ ಮಾಡಲು ಮನತೋಚಿದಂತೆ ಎಲ್ಲ ಉಪಾಯಗಳನ್ನು ಮಾಡತೊಡಗಿದರು.

ಸೂರ್ಯೋದಯವಾಗತೊಡಗಿತು. ಸುತ್ತಲೆಲ್ಲ ಹಿಮಗುಡ್ಡಗಳು. ಸಹಾಯ ಮಾಡಲು ಬಂದ ಹಡಗಿಗೂ ಕೂಡ ಪೆಟ್ಟು ಹತ್ತಿತು. ಆದರೆ ಅದು ಸ್ವಲ್ಪದರಲ್ಲಿಯೇ ಅಪಘಾತದಿಂದ ತಪ್ಪಿಸಿಕೊಂಡಿತು. ಸಹಾಯದ ಹಡಗು ಲೈಫ್ ಬೋಟ್ ಗಳ ಸಮೀಪ ಬರತೊಡಗಿತು. ಕೊನೆಯಲ್ಲಿ ಸಹಾಯ ತಲುಪಿತು.



ಎಲ್ಲರ ಕಣ್ಣುಗಳು ಈ ಸಹಾಯ ಮಾಡುವ ಹಡಗಿನ ಮೇಲಿದ್ದವು. ಲೈಫ್ ಬೋಟ್ ದಲ್ಲಿಯ ಜನರು ಹಡಗಿನ ಮೇಲೆ ಹತ್ತತೊಡಗಿದರು. ಸಮುದ್ರ ಪ್ರಕ್ಷುಬ್ಧವಾಗಿತ್ತು. ಇದಕ್ಕೆಲ್ಲ ಸಾಕಷ್ಟು ವೇಳೆ ಹಿಡಿಯಿತು. ಕೊನೆಯಲ್ಲಿ ಎಲ್ಲರೂ ಸುರಕ್ಷಿತತೆಯಿಂದ ಹಡಗನ್ನು ಏರಿದರು.



ಜಗತ್ತಿಗೆ ಈ ವಾರ್ತೆ ತಿಳಿಯಿತು. ಎಂದಿಗೂ ಮುಳುಗಲಾರದ ಟೈಟಾನಿಕ್ ಸಮುದ್ರದಲ್ಲಿ ಮುಳುಗಿ ಹೋಯಿತು. 2200ಕ್ಕೂ ಮೇಲಿದ್ದ ಪ್ರಯಾಣಿಕರಲ್ಲಿ ಕೇವಲ 705 ಪ್ರಯಾಣಿಕರು ಜೀವಂತ ಉಳಿದರು. ಇದು ಹೇಗೆ ಆಯಿತು? ಇದು ಹೀಗೇಕೆ ಆಯಿತು? ಯಾರಿಗೂ ತಿಳಿಯಲಾರದ ಒಗಟು. ಸಹಾಯ ಮಾಡುವ ಹಡಗು ನ್ಯೂಯಾರ್ಕ ಬಂದರವನ್ನು ತಲುಪಿದಾಗ 40 ಸಾವಿರ ಜನರು ದಾರಿ ನೋಡುತ್ತ ನಿಂತಿದ್ದರು.
ಟೈಟಾನಿಕ್ ಅಪಘಾತದಿಂದ ಬದುಕಿ ಉಳಿದವರು ತಮ್ಮ ಕತೆಗಳನ್ನು ಹೇಳತೊಡಗಿದರು. ಇಡೀ ಜಗತ್ತಿಗೆ ಯಾವದು ಸತ್ಯ ಎಂಬುದು ತಿಳಿಯಿತು. ಸುರಕ್ಷಿತವೆಂದು ತಿಳಿದ ಹಡಗು ಸುರಕ್ಷಿತವಿರಲಿಲ್ಲ. ಟೈಟಾನಿಕ್ ಗೆ ಇದು ಬಹಳ ಸಮಯದ ನಂತರ ತಿಳಿಯಿತು. ಆದರೆ ಉಳಿದ ಹಡಗುಗಳಿಗೆ ತಿಳಿಯಲು ತಡವಾಗಲಿಲ್ಲ.
ಹೊಸ ಸುರಕ್ಷಿತತೆಯ ಬಗೆಗಿನ ಕಾನೂನುಗಳನ್ನು ಅಂಗೀಕರಿಸಲಾಯಿತು. ಈಗಿದ್ದ ಕಾನೂನುಗಳಲ್ಲಿ ಹಲವು ಬದಲಾವಣೆ ಮಾಡಲಾಯಿತು.
ಇಂದು ಪ್ರತಿಯೊಂದು ಹಡಗಿನಲ್ಲಿ ಪ್ರತಿಯೊಬ್ಬ ಪ್ರಯಾಣಿಕರಿಗಾಗಿ ಲೈಫ್ ಬೋಟ್ ಗಳು ಇರಲೇಬೇಕು ಎಂಬ ಕಟ್ಟಳೆ ಮಾಡಲಾಯಿತು. ಹಡಗಿನಲ್ಲಿ ಏರಿದ ಕೂಡಲೇ ಲೈಫ್ ಬೋಟ್ ನ್ನು ಹೇಗೆ ಉಪಯೋಗಿಸಬೇಕು ಎಂಬ ಡ್ರಿಲ್ ಮಾಡಲು ಕಡ್ಡಾಯ ಮಾಡಲಾಯಿತು. ಅಪಘಾತ ಸಂಭವಿಸಿದಾಗ ಪ್ರಯಾಣಿಕರು ಏನೇನು ಮಾಡಬೇಕು ಎಂದು ತಿಳಿಸಿ ಹೇಳತೊಡಗಿದರು.

ಹಡಗಿನಲ್ಲಿಯ ರೇಡಿಯೋಗಳನ್ನು ಸ್ವಿಚ್ ಆಫ್ ಮಾಡಕೂಡದು ಎಂದು ಕಡ್ಡಾಯ ಮಾಡಲಾಯಿತು. ಪ್ರತಿಯೊಂದು ಕರೆಗೆ ಸಹಾಯ ಮಾಡಲೇಬೇಕು ಎಂದು ಕಾನೂನು ಮಾಡಲಾಯಿತು.
ಈಗ ಹಿಮಗುಡ್ಡಗಳ ಹತ್ತಿರ ಸುರಕ್ಷಾ ಅಧಿಕಾರಿಗಳನ್ನು ನೇಮಿಸಲಾಯಿತು. ಅವರು ಹಡಗುಗಳು ಅಪಘಾತಗಳಿಗೆ ಈಡಾಗಬಾರದೆಂದು ಮುನ್ಸೂಚನೆ ಕೊಡತೊಡಗಿದರು. ಸುರಕ್ಷಾ ವಿಮಾನಗಳು ಹಡಗುಗಳಿಗೆ ಎಚ್ಚರಿಕೆ ಕೊಡತೊಡಗಿದವು. ಹಿಮಗುಡ್ಡಗಳು ಹಡಗುಗಳನ್ನು ತಡೆಹಿಡಿಯಬಾರದೆಂದು ಕಾಳಜಿ ವಹಿಸಲಾಯಿತು. ಟೈಟಾನಿಕ್ ವು ಜಗತ್ತಿಗೆನೇ ಒಂದು ದೊಡ್ಡ ಪಾಠವನ್ನು ಕಲಿಸಿತು. ಆದರೆ ಅದಕ್ಕಾದ ಹಾನಿ ತುಂಬಿ ಬರಲಾರದಷ್ಟಿತ್ತು.

4

ಕೊನೆಗೂ ದೊರೆಯಿತು.

ಈ ನಡುವೆ ಅದೆಷ್ಟೋ ವರುಷಗಳು ಕಳೆದವು. ಟೈಟಾನಿಕ್ ಸಮುದ್ರದ ಕಪ್ಪು ನೀರಿನಲ್ಲಿ ಎಷ್ಟೋ ಮೈಲು ಕೆಳಗೆ ಮುಳುಗಿ ಹೋಗಿ ಕೆಸರಿನಲ್ಲಿ ಸಿಕ್ಕಿ ಬಿದ್ದಿತ್ತು. ಇಂತಹ ಆಳವಾದ ನೀರಿನಲ್ಲಿ ಹೋಗಲು ಯಾರಿಗೂ ಧೈರ್ಯವಿರಲಿಲ್ಲ. ಯಾರಿಗೂ ಈ ಹಡಗಿನ ಅಂಶಗಳು ದೊರೆಯಲಿಲ್ಲ. ಕೆಳಗಿನ ನಕ್ಷೆಯು ಟೈಟಾನಿಕ್ ಮುಳುಗಿದ ಸ್ಥಳವನ್ನು ತೋರಿಸುತ್ತದೆ.



ಕೆಲವರಿಗೆ ಟೈಟಾನಿಕ್ ತುಂಡುತುಂಡಾಗಿದೆ ಎಂದು ಅನ್ನಿಸುತ್ತಿತ್ತು. ಲಕ್ಷಾನುಗಟ್ಟಲೆ ತುಂಡುಗಳಿರಬಹುದೆಂದು ಅವರು ಊಹಿಸುತ್ತಿದ್ದರು.

ಆದರೂ ಸಮುದ್ರದಲ್ಲಿಯ ಐಶ್ವರ್ಯದ ಶೋಧದಲ್ಲಿದ್ದ ಬೇಟೆಗಾರರು ಮಾತ್ರ ಈ ಅದ್ಭುತ ಹಡಗಿನ ಕನಸು ಕಾಣುತ್ತಿದ್ದರು. ಮುಳುಗಿದ ಹಡಗಿನಲ್ಲಿ ಸಾಕಷ್ಟು ಚಿನ್ನ, ವಜ್ರ ಮತ್ತು ಮುತ್ತುಗಳಿವೆ ಎಂಬುದು ಅವರಿಗೆ ಖಚಿತವಾಗಿತ್ತು.

ಅವರಲ್ಲಿಯ ರಾಬರ್ಟ್ ಬಲ್ಲಾರ್ಡ್ ಎಂಬ ವ್ಯಕ್ತಿ ಕೂಡ ಇಂತಹ ಕನಸನ್ನು ಕಂಡವನಿದ್ದನು. ರಾಬರ್ಟ್ ಸಮುದ್ರಶಾಸ್ತ್ರಜ್ಞ. ಸಾಗರಗಳ ಅಧ್ಯಯನ ಮಾಡಿದವ. ಮ್ಯಸಾಚ್ಯುಸೆಟ್ ದಲ್ಲಿಯ ಪ್ರಸಿದ್ಧವಾದ ವೂಡ್ಸ್ ಹೋಲ್ ಎಂಬ ಪ್ರಯೋಗಶಾಲೆಯಲ್ಲಿ ಆತ ಕೆಲಸ ಮಾಡುತ್ತಿದ್ದನು. ಅವನಿಗೆ ಸಮುದ್ರದ ತಳದಲ್ಲಿಯ ಐಶ್ವರ್ಯದಲ್ಲಿ ರುಚಿ ಇರಲಿಲ್ಲ. ಅವನಿಗೆ ಹಡಗಿನಲ್ಲಿ ರುಚಿ ಇತ್ತು. ಆತ ಇದರ ಬಗ್ಗೆ ಎಷ್ಟೋ ವರುಷ ಆಲೋಚಿಸುತ್ತಿದ್ದನು.

ಆತನು ಒಂದು ವಿಶೇಷವೆನ್ನಿಸುವ ಸಂಶೋಧನೆ ಮಾಡಿದ್ದನು. ಆತನು ಸಮುದ್ರದಾಳದಲ್ಲಿಯ ನೀರೊಳಗೆ ಹೋಗುವ ರೋಬೊದ ರಚನೆ ಮಾಡಿದ್ದನು.ಆ ರೋಬೊದ ಹೆಸರು ಆರ್ಗೊ ಎಂದು ಇತ್ತು.

ಆರ್ಗೊ ತುಂಬ ಆಳದಲ್ಲಿಯ ನೀರೊಳಗೆ ಧುಮುಕಬಹುದು. ಅದರ ಹತ್ತಿರ ಬೆಳಕು ಕೊಡುವ ಬ್ಯಾಟರಿ ಮತ್ತು ವೀಡಿಯೊ ಕ್ಯಾಮೆರಾಗಳು ಇದ್ದವು. ಅದು ಸಾಗರದ ತಳದ ನೆಲದವರೆಗೆ ಹೋಗಿ ವೀಡಿಯೊ ಚಿತ್ರಗಳನ್ನು ತೆಗೆದು ಹಡಗಿನಲ್ಲಿರುವ ಟಿವಿ ಪರದೆಗೆ ಕಳುಹಿಸಬಹುದಿತ್ತು.

ರಾಬರ್ಟ್ ಟೈಟಾನಿಕ್ ದ ಪೂರ್ಣ ಅಭ್ಯಾಸ ಮಾಡಿದ್ದನು. ಅವನು ಅವುಗಳ ಫೋಟೊ ಮತ್ತು ನಕಾಶೆಗಳನ್ನು ಅಭ್ಯಸಿಸಿದ್ದನು. ಅವನು ಮುಂದಿನ ಸಂಶೋಧನೆಗಾಗಿ ಅಣಿಯಾಗಿದ್ದನು. ಈ ರಹಸ್ಯಮಯ ಹಡಗು ಎಲ್ಲಿದೆ ಎಂಬುದು ಅವನಿಗೆ ತಿಳಿದಿತ್ತು. ಈ ಹಡಗು ಅವನ ದಾರಿ ಕಾಯುತ್ತಿದೆ ಎಂದು ಅವನಿಗೆ ಅನ್ನಿಸುತ್ತಿತ್ತು.

1985ರ ಬೇಸಿಗೆಯಲ್ಲಿ ಆತನು ನ್ಯೂಫೌಂಡಲ್ಯಾಂಡ್ ದ ಉತ್ತರಕ್ಕೆ ಸಮುದ್ರ ಪ್ರವಾಸ ಮಾಡಿದನು. ಆತನ ಜೊತೆ ಕೆಲ ವಿಜ್ಞಾನಿಗಳು ಮತ್ತು ಆರ್ಗೊ ರೋಬೊ ಕೂಡ ಇದ್ದವು. ರೋಬೊ ಸಮುದ್ರತಳದಲ್ಲಿ ಹೋಗಿ ಶೋಧಿಸತೊಡಗಿತು. ಇವನಿಗೆ ನೀರಿನಲ್ಲಿ ಕಾಲಿಡುವ ಅವಶ್ಯಕತೆ ಇರಲಿಲ್ಲ. ಆದರೆ ಟಿವಿ ಪರದೆಯ ಮುಂದೆ ಕುಳಿತು ನೀರಿಕ್ಷಣೆ ಮಾಡಬೇಕಾಗುತ್ತಿತ್ತು. ಎಷ್ಟೋ ದಿವಸಗಳು ಉರುಳಿದವು. ಪರದೆಯ ಮೇಲೆ ಕೇವಲ ಉಸುಕು ಮತ್ತು ಹೆಚ್ಚು ಉಸುಕು. ಕೊನೆಗೊಮ್ಮೆ ಪರದೆಯ ಮೇಲೆ ಬೇರೆ ಏನೋ ಕಾಣಿಸತೊಡಗಿತು. ಹಡಗಿರಬಹುದೇ? ಅಹುದು. ಅದು ಒಂದು ದೊಡ್ಡ ಹಡಗಿತ್ತು. ಎಲ್ಲ ವಿಜ್ಞಾನಿಗಳಿಗೆ ಆನಂದವಾಯಿತು. ಅವರು ಟೈಟಾನಿಕ್ ನ್ನು ಶೋಧಿಸುವ ಮಹತ್ವದ ಕೆಲಸ ಮಾಡಿದ್ದರು!

ರಾಬರ್ಟ್ ನಿಗೆ ತನ್ನ ಕಣ್ಣುಗಳ ಮೇಲೆಯೇ ವಿಶ್ವಾಸವಿರಲಿಲ್ಲ. “ಒಂದು ಭೂತ ನೋಡುತ್ತಿದ್ದೇನೆ,” ಎಂದು ಅವನಿಗೆ ಅನ್ನಿಸಿತು. ಅಲ್ಲಿ ಟೈಟಾನಿಕ್ ಇತ್ತು. ಅಲ್ಲದೆ ಅದು ಸಮುದ್ರದ ತಳದಲ್ಲಿ ಸಿಕ್ಕಿಬಿದ್ದಿತ್ತು. ಅದು ತುಂಡುತುಂಡಾಗಿತ್ತು. ಆದರೆ ರಾಬರ್ಟ್ ನಿಗೆ ಅದು ಎಷ್ಟು ಸುಂದರವಿತ್ತು ಎಂಬುದರ ಅರಿವು ಇತ್ತು.

ಮುಂದಿನ ಎಷ್ಟೋ ದಿನ ರಾಬರ್ಟ್ ಹಡಗಿನ ಭಾಗಗಳನ್ನು ನೋಡುತ್ತಲಿದ್ದನು. ಅವನು ಹಡಗಿನ ತುತ್ತತುದಿಯಿಂದ ನೀರಿಕ್ಷಣೆ ಮಾಡಿ ಹಿಮಗುಡ್ಡವನ್ನು ನೋಡಿದ ಮುರಿದು ಬಿದ್ದ ಕೋಣೆಯನ್ನು ನೋಡಿದನು. ಗಾಜಿನ ಖಿಟಕಿ ಕೆಳಗೆ ಉರುಳಿ ಬಿದ್ದಿತ್ತು. ಹಡಗಿನ ದೈತ್ಯ ಆಕಾರದ ಲಂಗರುಗಳು ಅಲ್ಲಿಯೇ ಇದ್ದವು. ವೈನ್ ಬಾಟಲಿಗಳು, ಪ್ರಯಾಣಿಕರ ಸೂಟಕೇಸುಗಳು ಚೆಲ್ಲಾಪಿಲ್ಲಿಯಾಗಿ ಅಲ್ಲಿ ಹರಡಿದ್ದವು.
ಇದು ಅದ್ಭುತವಾಗಿತ್ತು. ಆದರೂ ನೋಡಲು ವೇದನೆ ಕೊಡುತ್ತಿತ್ತು. ಇಷ್ಟೊಂದು ಪ್ರಯಾಣಿಕರು ಎಷ್ಟೋ ಕನಸುಗಳನ್ನು ಕಟ್ಟುತ್ತ ಪ್ರವಾಸ ಮಾಡುತ್ತಿದ್ದರು. ಆದರೆ ಅವರಲ್ಲಿ ಕೆಲವರೇ ಮರಳಿ ಬಂದರು.

ಕೊನೆಗೊಮ್ಮೆ ರಾಬರ್ಟ್ ಮರಳಿ ಮನೆಗೆ ಹೋದನು. ಅವನು ಯಾರಿಗೂ ಟೈಟಾನಿಕ್ ದ ಬಗ್ಗೆ ಏನೂ ಹೇಳಲಿಲ್ಲ. ಆ ಹಡಗು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿರಲಿ ಎಂದು ಅವನ ಆಶೆ. ಅದನ್ನು ಐಶ್ವರ್ಯದ ಬೇಟೆಗಾರರ ಕೈಯಿಂದ ತಪ್ಪಿಸಬೇಕಾಗಿತ್ತು.
ರಾಬರ್ಟ್ ನಿಗೆ ಮತ್ತೊಮ್ಮೆ ಟೈಟಾನಿಕ್ ನೋಡಬೇಕೆನಿಸಿತು. ಮುಂದಿನ ಒಂದು ವರುಷದ ಮೇಲೆ ಆತನು ಒಂದು ಚಿಕ್ಕ ಸಬಮರಿನ್ ತೆಗೆದುಕೊಂಡು ಟೈಟಾನಿಕ್ ದ ಡೆಕ್ ನ್ನು ಮುಟ್ಟಿದನು. ತನ್ನ ರೋಬೋವನ್ನು ಟೈಟಾನಿಕ್ ದ ಒಳಭಾಗದಲ್ಲಿ ಕಳುಹಿಸಿದನು.

ರಾಬರ್ಟ್ ಅಲ್ಲಿಯ ಯಾವ ವಸ್ತುಗಳನ್ನು ತೆಗೆದುಕೊಳ್ಳಲಿಲ್ಲ. ಆದರೆ ಅಲ್ಲಿ ಅವನು ಒಂದು ಸೂಚನೆಯ ಪ್ಲೇಟನ್ನು ಬಿಟ್ಟು ಬಂದನು. ಯಾರಾದರೂ ಅಲ್ಲಿ ಬಂದರೆ ಅವರಿಗಾಗಿ ಈ ಸೂಚನೆ ಇತ್ತು. ಅದರ ಮೇಲೆ "ಈ ಹಡಗನ್ನು ತನ್ನಷ್ಟಕ್ಕೆ ತಾನೇ ಇರಲು ಬಿಡಬೇಕು," ಎಂಬ ವಿನಂತಿ ಇತ್ತು.

ಜಗತ್ತೆಲ್ಲ ರಾಬರ್ಟ್ ನ ಶೋಧವನ್ನು ಬಾಯಿ ತುಂಬ ಹೊಗಳಿತು. ಕೆಲವರಿಗೆ ಇದು ಒಂದು ವಿಶೇಷ ಕೆಲಸ ಎಂದು ಅನ್ನಿಸಿತು. ಅವರಲ್ಲಿಯ ಕೆಲವರು ಟೈಟಾನಿಕ್ ದ ಮೇಲಿನ ಪ್ರಯಾಣಿಕರಿದ್ದರು. ಅವರು ಆಗ ಚಿಕ್ಕ ವಯಸ್ಸಿನವರಿರಬೇಕು. ಈಗ ಅವರೆಲ್ಲ ವೃದ್ಧರು. ಎಂದಿಗೂ ಮುಳುಗಲಾರದ ಹಡಗು ಎಂಬುದನ್ನು ಅವರು ನೆನಪಿನಲ್ಲಿ ಇಟ್ಟಿದ್ದರು. ಅದನ್ನವರು ಮರೆಯಲು ಸಾಧ್ಯವಿರಲಿಲ್ಲ.

ಟೈಟಾನಿಕ್
ಕಳೆದು ಹೋಯಿತು...ಮತ್ತೇ ಸಿಕ್ಕಿತು

ಜಗತ್ತು ಇನ್ನೂವರೆಗೂ ನೋಡಿರಲಾರದ
ಟೈಟಾನಿಕ್ ಇದು ಬೃಹತ್ ಆಕಾರದ
ಹಡಗು.
ಜನರಿಗೆಲ್ಲರಿಗೂ ಇದು ಅತ್ಯಂತ
ಸುರಕ್ಷಿತವಾದ ಹಡಗು ಎಂದೆನ್ನಿಸಿತು.
ಆದರೆ ಅದರ ಮೊಟ್ಟ ಮೊದಲನೆಯ
ಪ್ರವಾಸದಲ್ಲಿ ಅದು ಸಮುದ್ರದಲ್ಲಿ ಮುಳುಗಿ
ತಳವನ್ನು ಕಂಡಿತು!
ಇಂತಹ ದುರ್ಘಟನೆ ಹೇಗೆ ಆಯಿತು?
ಈಗ ಅದರ ಮುರಿದ ಭಾಗಗಳು
ಎಲ್ಲಿರುವವು?
ಇದು ಒಂದು ಅಚ್ಚರಿಗೊಳಿಸುವ ಕತೆ.
ಇದನ್ನೆಲ್ಲ ನೀವು ಇಲ್ಲಿ ಓದಬಹುದು.